ಕೃಷ್ಣರಾಯರು ಬೆಳಗಾಂವಿಯಲ್ಲಿ ಒಂದು ಕನ್ನಡ ವಾರಪತ್ರಿಕೆ ಸ್ಥಾಪಿಸಿ, ಅದನ್ನು ಬಹಳ ಕಷ್ಟದಿಂದ ಸಾಗಿಸಿಕೊಂಡು ಬರುತ್ತಿದ್ದರು.

ಬೆಳಗಾವಿಯ ಸಂಗೀತ ಸಮ್ಮೇಳನ, ಕರ್ನಾಟಕ ಮತ್ತು ಔತ್ತರೇಯ ಸಂಗೀತ ಸಂಪ್ರದಾಯಗಳ ವಿಚಾರ ವಿನಿಮಯಕ್ಕೆ ಪ್ರಾಧಾನ್ಯ ಕೊಡಬೇಕೆಂಬುದು ರಾಯರ ಆಸೆಯಾಗಿತ್ತು.

ಕೃಷ್ಣರಾಯರು ಬೆಂಗಳೂರಿನ ಕೆಲಸ ಮುಗಿಸಿಕೊಂಡು ಮೈಸೂರಿಗೆ ಹೋಗಿ ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ದರ್ಶನ ಪಡೆದು, ಅವರಿಗೆ ತಮ್ಮ ಆಕಾಂಕ್ಷೆಯನ್ನು ಅರಿಕೆ ಮಾಡಿಕೊಂಡರು. ಮಹಾಸ್ವಾಮಿಯವರು ರಾಯರ ಯೋಜನೆ ಕೇಳಿ ಸಂತೋಷಿಸಿದ್ದುದಲ್ಲದೆ, ಅರಮನೆಯ ಹಿರಿಯ ಸಂಗೀತ ವಿದ್ವಾಂಸರನ್ನು ಬೆಳಗಾಂವಿಗೆ ಕಳಿಸಿಕೊಡಲು ಒಪ್ಪಿದರು.

ಬೆಳಗಾಂವಿಗೆ ಭಾರತದ ಎಲ್ಲ ಕಡೆಗಳಿಂದಲೂ ಸಂಗೀತ ವಿದ್ವಾಂಸರು ಧಾವಿಸಿ ಬಂದರು. ಮೈಸೂರಿನಿಂದ ವೀಣೆ ಶೇಷಣ್ಣನವರು, ಸುಬ್ಬಣ್ಣನವರು, ಬಿಡಾರದ ಕೃಷ್ಣಪ್ಪನವರು, ಚಿಕ್ಕ ರಾಮರಾಯರು, ಕಂಜರಿ ರಾಮದಾಸರು, ವೀಣೆ ಲಕ್ಷ್ಮೀನಾರಾಯಣಪ್ಪನವರು, ಚೌಡಯ್ಯನವರು. ಪುಟ್ಟಸ್ವಾಮಯ್ಯನವರು ಮೊದಲಾದ ಹಿರಿಯ ವಿದ್ವಾಂಸರು ಸಮ್ಮೇಳನದಲ್ಲಿ ಭಾಗವಹಿಸಿದರು. ಗಾಂಧೀಜಿ, ಸರೋಜಿನಿದೇವಿ, ಮೋತಿಲಾಲ್, ಸಿ.ಆರ್, ದಾಸ್, ಸೇನಗುಪ್ತ, ಬಾಬು ಶಿವಪ್ರಸಾದಗುಪ್ತ ಮೊದಲಾದ ಹಿರಿಯ ನಾಯಕರು ಶೇಷಣ್ಣನವರ ವೀಣೆ ಕೇಳಿ ಮುಗ್ಧರಾದರು.

ಈ ಸಮ್ಮೇಳನದಲ್ಲಿ ಒಂದು ದಿನ ಹಾಡಿದ ಹರೀಂದ್ರನಾಥ ಚಟ್ಟೋಪಾಧ್ಯಾಯರು ಯಾವದೋ ಜ್ಞಾನದಲ್ಲಿ ಕರ್ನಾಟಕ ಸಂಗೀತವನ್ನು ತೆಗಳಿದರು. ಅಲ್ಲಿಯೇ ಕುಳಿತಿದ್ದ ಕಂಜರಿ ರಾಮದಾಸರು ಕೈಗೆ ಕಂಜರಿ ತೆಗೆದುಕೊಂಡು, 'ಹಾಡಿ ನೋಡೋಣ' ಎಂದು ಸವಾಲು ಹಾಕಿದರು. ತಾಳಬ್ರಹ್ಮ ರಾಮದಾಸರ ಎದುರು ನಿಲ್ಲಲಾಗದೆ ಹರೀಂದ್ರನಾಥರು ತಮ್ಮ ಸೋಲನ್ನೊಪ್ಪಿಕೊಂಡು, ದಾಸರ ಕ್ಷಮೆ ಬೇಡಿದರಂತೆ.

ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ನಡೆದ ಒಂದು ಘಟನೆ ಬಹಳ ಸ್ವಾರಸ್ಯವಾಗಿದೆ. ಇದನ್ನು ನನಗೆ ಹೇಳಿದವರು ಕಾಂಗ್ರೆಸ್ಸಿನ ಪ್ರಚಾರಾಧಿಕಾರಿಗಳಾಗಿದ್ದ ನನ್ನ ಮಿತ್ರ ದ.ಕೃ. ಭಾರದ್ವಾಜರು. ಬಾಬು ಶಿವಪ್ರಸಾದಗುಪ್ತರು ತಮ್ಮ ಕಿಸೆಯಲ್ಲಿ ನಾಲ್ಕು ಸಾವಿರ ರೂಪಾಯಿಗಳ ನೋಟುಗಳನ್ನಿಟ್ಟುಕೊಂಡಿದ್ದರಂತೆ. ಅವರ ಕಿಸೆಯನ್ನು ಬ್ಲೇಡಿನಿಂದ ಕತ್ತರಿಸಿ ಯಾವನೋ ಜೇಬುಗಳ್ಳ ಹಣವನ್ನು ಅಪಹರಿಸಿದ. ಭಾರದ್ವಾಜರು ಸಂತಾಪ ವ್ಯಕ್ತಪಡಿಸಿದಾಗ ಶಿವಪ್ರಸಾದಗುಪ್ತರು 'ಹಣ ಹೋದರೆ ಹೋಗಲಿ, ಕಳ್ಳ ಎಷ್ಟು ಚೆನ್ನಾಗಿ ನನ್ನ ಜೇಬು ಕತ್ತರಿಸಿ ಹಣ ತೆಗೆದುಕೊಂಡಿದ್ದಾನೆ ಭಾರದ್ವಾಜ್' ಎಂದರಂತೆ. ಈ ಮಾತು ನನಗೆ 'ಮೃಚ್ಛಕಟಕ' ನಾಟಕದ ಚಾರುದತ್ತನ ಅಮರ ವಾಕ್ಯವನ್ನು ಸ್ಮರಣೆಗೆ ತರುತ್ತದೆ. ದರಿದ್ರ ಚಾರುದತ್ತನನ್ನು ನಂಬಿ ವಸಂತಸೇನೆ ತನ್ನ ಒಡವೆಗಳನ್ನೆಲ್ಲಾ ಅವರ ವಶಕ್ಕೆ ಕೊಟ್ಟಿರುತಾಳೆ. ರಾತ್ರಿ ಚಾರುದತ್ತ ಮಲಗಿದ್ದಾಗ ಕಳ್ಳ ಶರ್ವಿಲಕ ಅವನ ಮನೆಗೆ ಕನ್ನ ಹಾಕಿ ಒಡವೆಗಳನ್ನು ಅಪಹರಿಸುತ್ತಾನೆ. ಚಾರುದತ್ತ ಎದ್ದ ಮೇಲೆ ಒಡವೆಗಳ ಅಪಹರಣಕ್ಕೆ ಪರಿತಪಿಸುವದಿಲ್ಲ. 'ಇಷ್ಟು ಚೆನ್ನಾಗಿ ಕನ್ನ ಕೊರೆದಿರುವವನು ಎಂಥ ಕಲಾವಿದ, ಈ ದರಿದ್ರನ ಮನೆಯಲ್ಲಿ ಅವನ ಜಾಣ್ಮೆಗೆ ತಕ್ಕ ಪ್ರತಿಫಲ ಸಿಕ್ಕಲಿಲ್ಲವಲ್ಲಾ' ಎಂದು ಪರಿತಪಿಸುತ್ತಾನೆ.

ಬೆಳಗಾಂವಿ ಕಾಂಗ್ರೆಸ್ ಯಶಸ್ವಿಯಾಗಿ ಕನ್ನಡ ನಾಡಿಗೆ ಕೀರ್ತಿ ತಂದಿತು. ಇದರ ಶ್ರೇಯಸ್ಸಿನ ಬಹುಭಾಗ ಮುದವೀಡು ಕೃಷ್ಣರಾಯರಿಗೆ ಸೇರಬೇಕು.

ರಾಯರ ದೇಹವೂ ದೊಡ್ಡದು, ಗಂಟಲೂ ದೊಡ್ಡದು. ಅವರು ಸಾಮಾನ್ಯವಾಗಿ ಮಾತನಾಡುವಾಗಲೂ ಭಾಷಣ ಮಾಡುವಂತೆಯೇ ಇರುತ್ತಿತ್ತು. ಆದರೆ ಬೃಹದಾಕೃತಿಯ ಮೂರ್ತಿಯ ಅಂತಃಕರಣ ಅತಿ ಸರಳ ಕೋಮಲ. ಅವರ ನರನಾಡಿಗಳಲ್ಲಿ ಕನ್ನಡಾಭಿಮಾನ ಉಕ್ಕುತ್ತಿತ್ತು. ಪರ್ಶಿಯಾದ ಪ್ರವಾಸಿ ಸಂತ ಅಲ್ ಹಲಾಜ್ ಮನಸೂರ ಅದ್ವೈತವಾದಿಯಾಗಿದ್ದ. ಅವನ ಬೀಜಮಂತ್ರ